ದಿಃ 17.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಕೆ.ಎಂ.ಪಿ., ವಕೀಲರಿಂದ ಪ್ರತಿವಾದಿ ಪರವಾಗಿ

1. ವಾದಿಗಳು ನನ್ನ ಅಕ್ಕನ ಮಕ್ಕಳಾಗಿರುತ್ತಾರೆ. ನನ್ನ ಅಕ್ಕನ ಹೆಸರು ಕ್ರೆಟಾ ಡಿಸೋಜಾ ಆಗಿರುತ್ತದೆ. ಪೌಲ್ ಡಿಸೋಜಾ ನನ್ನ ಭಾವನಾಗಿರುತ್ತಾರೆ. ಪೌಲ್ ಡಿಸೋಜಾ ರವರು ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ಬೆಳಗವಳ್ಳಿಯ ವಾಸಿಯಾಗಿರುತ್ತಾರೆ. ಪೌಲ್ ಡಿಸೋಜಾ ರವರು ಯಾವ ವರ್ಷ ಬೆಳಗವಳ್ಳಿ ಬಿಟ್ಟು ಹೋಗಿರುತ್ತಾರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಮನೆ ಅಣಜೂರಿನಲ್ಲಿರುತ್ತದೆ. ನನ್ನ ಭಾವ ಪೌಲ್ ಡಿಸೋಜಾ ರವರು ಕಮರಗೋಡು ಎಸ್ಟೇಟ್ ನಲ್ಲಿ ಸುಮಾರು 32-35 ವರ್ಷ ಕೆಲಸ ಮಾಡಿರುತ್ತಾರೆ. ನನ್ನ ಭಾವ ಪೌಲ್ ಡಿಸೋಜಾ ರವರು ಅವರಿಗೆ 62 ವರ್ಷ ವಯಸ್ಸಾದಾಗ ಕಮರಗೋಡು ಎಸ್ಟೇಟ್ ನಿಂದ ಕೆಲಸ ಬಿಟ್ಟಿರುತ್ತಾರೆ. ಅಪ್ಪಾಯ್ಯ ಅಚಾರ್ ರವರು ನನಗೆ ಪರಿಚಯ ಇರುತ್ತಾರೆ. ಸಮಾರು 10 ವರ್ಷಗಳಿಂದ ನನಗೆ ಅಪ್ಪಾಯ್ಯ ಅಚಾರ್ ಪರಿಚಯ ಇರುತ್ತಾರೆ. ಅಣಜೂರು ಗ್ರಾಮಕ್ಕೂ ಚೆನ್ನಿಗ ಗ್ರಾಮಕ್ಕೆ 1 ½ ಕಿ.ಮೀ ಇರುತ್ತದೆ. ನನಗೆ ಸೇರಿದ ಜಮೀನು ಚೆನ್ನಿಗ ಗ್ರಾಮದಲ್ಲಿ ಇರುವುದಿಲ್ಲ. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನಿಮಗೆ ಯಾರು ಹೇಳಿರುವುದು ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ನೋಟೀಸ್ ಬಂದಿರುತ್ತದೆ ಎಂದು ನುಡಿಯುತ್ತಾರೆ.
2. ನ್ಯಾಯಾಲಯದಿಂದ ನೋಟೀಸ್ ಬರುವ ಪೂರ್ವದಲ್ಲಿ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯುವಂತೆ ನನಗೆ ಬೇರೆ ಯಾರು ಹೇಳಿರುವುದಿಲ್ಲ. ನ್ಯಾಯಾಲಯದ ನೋಟೀಸ್ ಬಂದ ನಂತರ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯುವಂತೆ ನನಗೆ ಆದಿತ್ಯ ವಕೀಲರು ತಿಳಿಸಿರುತ್ತಾರೆ. ಯಾವ ದಿನಾಂಕ ಆದಿತ್ಯಾ ವಕೀಲರು ಸಾಕ್ಷಿ ನುಡಿಯಲು ನನ್ನ ಬಳಿ ಹೇಳಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. ನಾನು ಸಾಕ್ಷಿ ಹೇಳಬೇಕು ಎಂದು ಹೇಳಿದ ವಿಷಯವನ್ನು ಬರವಣಿಗೆ ಮೂಲಕ

ವಕೀಲರಿಗೆ ನಾನು ಹೇಳಿರುವುದಿಲ್ಲ. ಸಾಕ್ಷಿ ಹೇಳುವ ಬಾಬ್ತು ಬರವಣಿಗೆ ಮಾಡಿ ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಅಪ್ಪಾಯ್ಯ ಅಚಾರ್ ರವರು ದಾವಾ ಆಸ್ತಿಯ ಮಾರಾಟದ ಬಗ್ಗೆ ನನ್ನ ಬಳಿ ಹೇಳಿರುವುದಿಲ್ಲ. ಅಪ್ಪಾಯ್ಯ ಅಚಾರ್ ರವರ ಆಸ್ತಿಗೆ ಸಂಬಂಧಪಟ್ಟ ದಾಖಲಾತಿಯನ್ನು ನಾನು ಒಪ್ಪಿಗೆ ಪತ್ರ ಬರೆಯುವ ಸಮಯದಲ್ಲಿ ನೋಡಿರುತ್ತೇನೆ. ನಾನು ಅಪ್ಪಾಯ್ಯ ಅಚಾರ್ ರವರ ಆಸ್ತಿಗೆ ಸಂಬಂಧಪಟ್ಟ ಕ್ರಯಪತ್ರವನ್ನು ನೋಡಿರುತ್ತೇನೆ ಸದರಿ ಕ್ರಯಪತ್ರವು ಚಿನ್ನಿಗೆ ಸರ್ವೆ ನಂಬರ್ 17 ಕ್ಕೆ ಸಂಬಂಧಪಟ್ಟ 15 ಗುಂಟೆ ಜಮೀನಿನ ಕ್ರಯ ಪತ್ರವನ್ನು ನೋಡಿರುತ್ತೇನೆ ಸದರಿ ಕ್ರಯ ಪತ್ರವು ಯಾವ ವರ್ಷ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಒಪ್ಪಿಗೆ ಕರಾರು ಪತ್ರವು ದಿನಾಂಕ13-11-2014 ರಂದು ಆಗಿರುತ್ತದೆ. ಸದರಿ ಒಪ್ಪಿಗೆ ಕರಾರು ಪತ್ರದಲ್ಲಿ 100X 100 ಅಡಿ ಆಸ್ತಿಯನ್ನು ನಮೂದು ಮಾಡಿರುತ್ತದೆ. ಸದರಿ ಆಸ್ತಿಯ ಚೆಕ್ಕುಬಂದಿಯನ್ನು ಒಪ್ಪಿಗೆ ಪತ್ರದಲ್ಲಿ ನಮೂದು ಮಾಡಿರುತ್ತದೆ. ಒಪ್ಪಿಗೆ ಕರಾರು ಪತ್ರದಲ್ಲಿ ನಮೂದು ಮಾಡಿರುವ ಪೂರ್ವಕ್ಕೆ ಕಮಲಮ್ಮನ ಆಸ್ತಿ, ಪಶ್ಚಿಮಕ್ಕೆ ಪಂಚಾಯ್ತಿ ರಸ್ತೆ, ಉತ್ತರಕ್ಕೆ ಉಪೇಂದ್ರ ರವರ ಆಸ್ತಿ, ದಕ್ಷಿಣಕ್ಕೆ ಮೂಡಿಗೆರೆ ಬೇಲೂರು ರಸ್ತೆ ಇರುತ್ತದೆ. ಸರ್ವೆ ನಂಬರ್ 17 ರಲ್ಲಿ ಇರುವ 15 ಗುಂಟೆಯ ಉತ್ತರ ದಿಕ್ಕಿನಲ್ಲಿ ಸದರಿ ಕರಾರು ಪತ್ರದಲ್ಲಿ ನಮೂದು ಮಾಡಿರುವ 100X100 ಅಡಿ ಆಸ್ತಿ ಇರುತ್ತದೆ. ಒಪ್ಪಿಗೆ ಕರಾರು ಪತ್ರದ ಬಗ್ಗೆ ಸುಮಾರು 5-6 ಬಾರಿ ಮಾತುಕತೆ ಆಗಿರುತ್ತದೆ. ಒಪ್ಪಿಗೆ ಕರಾರು ಪತ್ರ ಆಗುವ 2 ತಿಂಗಳ ಪೂರ್ವದಲ್ಲಿ ಸದರಿ ಮಾತುಕತೆ ಆಗಿರುತ್ತದೆ. ಮಾತುಕತೆ ಆಗುವ ಸಮಯದಲ್ಲಿ ದಾವಾ ಆಸ್ತಿಯನ್ನು ಅಳತೆ ಮಾಡಿರುತ್ತದೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಒಪ್ಪಿಗೆ ಕರಾರು ಪತ್ರ ಆಗುವ ದಿನದಂದು ಅಪ್ಪಾಯ್ಯ ಅಚಾರ್ ರವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿ. ಒಪ್ಪಿಗೆ ಕರಾರು ಪತ್ರವನ್ನು ಯಾರು ಬರೆದಿರುತ್ತಾರೆ ಎಂದು ಅವರ ಹೆಸರು ನನಗೆ ನೆನಪಿಲ್ಲ. ಸಾಕ್ಷಿಯು ಮುಂದುವರೆದು ಮೂಡಿಗೆರೆಯ ಪೊಲೀಸ್ ಠಾಣೆ ಎದುರುಗಡೆ ಇರುವ ಟೈಪಿಸ್ಟ್ ಸದರಿ ದಾಖಲೆಯನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ಬೆರಳಚ್ಚು ಮಾಡಿದ

ಬೆರಳಚ್ಚುಗಾರರು ನನಗೆ ಪರಿಚಯ ಇರುವುದಿಲ್ಲ.

3. ಒಪ್ಪಿಗೆ ಕರಾರು ಪತ್ರ ವನ್ನು ಇಸ್ಟಾಂಪ್ ಪೇಪರ್ ನಲ್ಲಿ ಮಾಡಲಾಗಿರುತ್ತದೆ. ಸ್ಟಾಂಪ್ ಪೇಪರ್ ನ್ನು ಅಪ್ಪಾಯ್ಯ ಅಚಾರ್ ರವರೇ ತಂದಿರುತ್ತಾರೆ. 500-00 ರೂಪಾಯಿ ಮುಖಬೆಲೆಯ ಸ್ಟಾಂಪ್ ಪೇಪರ್ ನ್ನು ತಂದಿರುತ್ತಾರೆ. ಒಪ್ಪಿಗೆ ಕರಾರು ಪತ್ರವು ಒಟ್ಟು 4 ಪುಟಗಳಲ್ಲಿ ಇರುತ್ತದೆ. ಒಪ್ಪಿಗೆ ಕರಾರು ಪತ್ರ ಕ್ಕೆ ಅಪ್ಪಾಯ್ಯ ಅಚಾರ್, ಪೌಲ್ ಡಿಸೋಜಾ ಒಂದರಿಂದ ಮೂರನೇ ಪ್ರತಿವಾದಿಗಳು ಹಾಗೂ ನಾನು ಮತ್ತು ಗಿರೀಶ್ ಸಹಿ ಮಾಡಿರುತ್ತೇವೆ. ಕರಾರು ಪತ್ರವನ್ನು ತಯಾರು ಮಾಡಿರುವ ಬೆರಳಚ್ಚುಗಾರರು ಸದರಿ ದಾಖಲಾತಿಗೆ ಸಹಿ ಮಾಡಿರುವುದಿಲ್ಲ. ಕರಾರು ಪತ್ರ ವನ್ನು ಯಾರು ತಯಾರು ಮಾಡಿರುತ್ತಾರೆ ಎಂದು ಸದರಿ ಪತ್ರದಲ್ಲಿ ಬರೆದಿರುವುದಿಲ್ಲ ದಿನಾಂಕ 13-11-2014 ರಂದು ಯಾವುದೇ ಒಪ್ಪಿಗೆ ಕರಾರು ಪತ್ರ ವನ್ನು ಮಾಡದೆ ಇರುವ ಕಾರಣದಿಂದಲೇ ಸದರಿ ದಾಖಲಾತಿಗೆ ಯಾರೆಲ್ಲಾ ಸಹಿ ಮಾಡಿರುತ್ತಾರೆ ಮತ್ತು ಯಾರು ಬರವಣಿಗೆ ಮಾಡಿರುತ್ತಾರೆ ಎಂದು ನನಗೆ ಹೇಳಲು ಸಾಧ್ಯ ವಾಗಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 13-11-2014 ರಂದು ಯಾವುದೇ ಒಪ್ಪಿಗೆ ಕರಾರು ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ ಸದಾರಿ ಕರಾರು ಪತ್ರದಲ್ಲಿ ಆಸ್ತಿಯ ಬಗ್ಗೆ ಎಷ್ಟು ಬಾರಿ ನಮೂದು ಮಾಡಲಾಗಿರುತ್ತದೆ ಎಂದು ನನಗೆ ನೆನಪಿಲ್ಲ. ಒಪ್ಪಿಗೆ ಪತ್ರದ ಎರಡನೇ ಪುಟಕ್ಕೆ ನಾನು ಸಹಿ ಮಾಡಿರುವುದಿಲ್ಲ ಸಾಕ್ಷಿಯು ಮುಂದುವರೆದು ನಾನು ನಾಲ್ಕನೇ ಪುಟಕ್ಕೆ ಮಾತ್ರ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾಲ್ಕನೇ ಪುಟಕ್ಕೆ ನಾನು ಸಹಿ ಮಾಡಿದ್ದೇನೆ ಎಂದು ಹೇಳಿದ ಸಹಿಯನ್ನು ನಾನು ಆದಿತ್ಯಾ ವಕೀಲರ ಮುಂದೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಒಪ್ಪಿಗೆ ಕರಾರು ಪತ್ರದಲ್ಲಿ ಆಗಿರುವ ತಿದ್ದುಪಡಿಗೆ ಸಹಿ ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ತಿದ್ದುಪಡಿಯ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ದಿನಾಂಕ 13-11-2014 ರ ನಂತರ ದಾವಾ ಆಸ್ತಿಯ ಸಲುವಾಗಿ ನಾನು ದಿನಾಂಕ 05-02-2015 ರಂದು ಕರಾರು ಪತ್ರವನ್ನು ನೋಟರಿ ಮಾಡಲು ಆದಿತ್ಯಾ

ವಕೀಲರ ಮುಂದೆ ಬಂದಿರುತ್ತೇನೆ. ದಿನಾಂಕ 05-02-2015 ರಂದು ನಾನು ಆದಿತ್ಯಾ ವಕೀಲರ ಮುಂದೆ ನಾನು ಯಾವುದೇ ದಾಖಲಾತಿಗೆ ಸಹಿ ಮಾಡಿರುವುದಿಲ್ಲ. ಸೃಷ್ಟಿ ಮಾಡಿರುವ ಒಪ್ಪಿಗೆ ಕರಾರು ಪತ್ರಕ್ಕೆ ನಾನು ದಿನಾಂಕ05-02-2015 ರಂದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಮಾರ್ಟಿನ್ ಲೋಬೋ ಆಗಿರುತ್ತದೆ. ನನ್ನ ತಂದೆ ಮಾರ್ಟಿನ್ ಲೋಬೋ ರವರು 22-10-2021 ರಂದು ಮೃತಪಟ್ಟಿರುತ್ತಾರೆ. ನನ್ನ ತಂದೆ ಮೃತ ಪಡುವ ಸಮಯದಲ್ಲಿ ಪೌಲ್ ಡಿಸೋಜಾ ಜೀವಂತ ಇರಲಿಲ್ಲ. ಪೌಲ್ ಡಿಸೋಜಾ ಮೃತ ಪಟ್ಟ ಒಂದು ವರ್ಷಗಳ ನಂತರ ನನ್ನ ತಂದೆಯು ಮೃತಪಟ್ಟಿರುತ್ತಾರೆ. ನನ್ನ ತಂದೆಯು ಮೃತಪಟ್ಟ ನಂತರ ದಾವಾ ಆಸ್ತಿಯನ್ನು ಬರೆದುಕೊಡುವಂತೆ ನಾನು ಪ್ರತಿವಾದಿಗಳ ಬಳಿ ಕೇಳಿರುತ್ತೇನೆ. ನನ್ನ ತಂದೆಯು ಮೃತಪಟ್ಟ ನಂತರ ವಾದಿ ಮತ್ತು ಪ್ರತಿವಾದಿಗಳ ನಡುವೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಬೇರೆ ಯಾವುದೇ ವ್ಯವಹಾರ ಆಗಿರುವುದಿಲ್ಲ. ಪ್ರತಿವಾದಿಗಳು ವಾದಿಗಳಿಗೆ ಕ್ರಯಪತ್ರದ ಪೂರ್ವದಲ್ಲಿ ಯಾವ ದಾಖಲಾತಿಗಳನ್ನು ಕೊಡಬೇಕು ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ. ಕ್ರಯಪತ್ರವನ್ನು ನೊಂದಾವಣಿ ಮಾಡಿಕೊಡಬೇಕು ಎನ್ನುವ ವಿಚಾರ ಮಾತ್ರ ನನಗೆ ಗೊತ್ತಿತ್ತು ದಿನಾಂಕ 05-02-2015 ರ ನಂತರ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಎರಡು ತಿಂಗಳ ಹಿಂದೆ ನೋಟೀಸ್ ಬರುವ ಪೂರ್ವದ ಅವಧಿಯಲ್ಲಿ ನಾನು ಆದಿತ್ಯಾವಕೀಲರನ್ನು ಭೇಟಿಯಾಗಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೇಳಿದ್ದು ಪಾಟೀ ಸವಾಲಿಗೆ ಕಾಲವಕಾಶ ನೀಡಲಾಯಿತು. )

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ